ಮುಂದಕ್ಕೆ ಹೋಗಿಬಿಡ್ತೇವೆ. ಇದು ಸೋಮಾಲಿಯಾದವರಿಗೆ ಸಾಧ್ಯವಿಲ್ಲ. ಅವರಿಗೆ ಇಂಗ್ಲಿಷ್ ಬರಲ್ಲ. ಅವರು ಆರ್ಥಿಕವಾಗಿ ಸಬಲರೂ ಅಲ್ಲ. 'ಹಿಜಾಬ್' ಬರೆಯುತ್ತಾ ಹೋದಂತೆ ಈ ಬಿಕ್ಕಟ್ಟುಗಳು ಹೆಚ್ಚು ನಿಚ್ಚಳವಾಗತೊಡಗಿದವು.

ನಾನು ಕೆಲಸ ಮಾಡುವ ಆಸ್ಪತ್ರೆಯಲ್ಲಿ ನಾನೊಬ್ಬ ಕಂದುಬಣ್ಣದ ವೈದ್ಯ. ಅಲ್ಲಿ ನನ್ನ ಚರ್ಮದ ಬಣ್ಣ ತುಂಬಾ ಮುಖ್ಯ. ನಾನು ಎಮರ್ಜೆನ್ಸಿ ರೂಮಲ್ಲಿ ಕೆಲಸ ಮಾಡ್ತೇನೆ. ಹೃದಯಾಘಾತಕ್ಕೆ ಒಳಗಾದ ಎಂಬತ್ತು ವರ್ಷದ ಒಬ್ಬ ವ್ಯಕ್ತಿ ನನ್ನ ಬಳಿಗೆ ಬರುತ್ತಾನೆ ಎಂದುಕೊಳ್ಳಿ. ನನ್ನನ್ನು ನೋಡಿದ ತಕ್ಷಣ ಅವನಿಗೆ ನನ್ನ ಬಗ್ಗೆ ನಂಬಿಕೆ ಬರುತ್ತೋ ಇಲ್ಲವೋ ಎಂದು ಹೇಳುವುದು ಕಷ್ಟ.

ಇದಕ್ಕೆ ಇನ್ನೊಂದು ತುದಿಯಲ್ಲಿ ಸೋಮಾಲಿಯಾದವರನ್ನು ನೋಡಬೇಕು. ಅವರಿಗೆ ಹೃದಯಾಘಾತ ಆದಾಗ ಅದನ್ನು ಹೇಳಿಕೊಳ್ಳಲೂ ಬರುವುದಿಲ್ಲ. ಎಲ್ಲವನ್ನೂ ಅತಿಯಾಗಿ ಬಣ್ಣಿಸುತ್ತಾರೆ. ಮಗುವಿಗೆ ಸ್ವಲ್ಪ ಜ್ವರ ಇದ್ದರೂ 'ಟೂ ಮಚ್ ಫೀವರ್' ಎನ್ನುತ್ತಾರೆ. ವೈದ್ಯರು ತಮ್ಮನ್ನು ತಕ್ಷಣ ಗಮನಿಸಬೇಕು ಎಂದು ಬಯಸುತ್ತಾರೆ. ಅದಕ್ಕಾಗಿಯೇ ಎಲ್ಲದಕ್ಕೂ 'ಟೂ ಮಚ್' ಎನ್ನುತ್ತಾರೆ. ಆಸ್ಪತ್ರೆಗೆ ಅವರು ಬಂದತಕ್ಷಣ 'ಅನದರ್ ಟೂ ಮಚ್ ಕಮಿಂಗ್' ಎನ್ನುವ ಭಾವನೆ ಉಂಟಾಗುತ್ತದೆ. ಒಂದು ದಿನ ನಾನು ತುಂಬಾ ಬಿಜಿಯಾಗಿದ್ದಾಗ, ಒಬ್ಬ ಪೇಷಂಟ್ ಬಂದು ಬೆಲ್ ಮಾಡಿದ. ತಕ್ಷಣವೇ 'ಅನದರ್ ಟೂ ಮಚ್' ಎನ್ನುವ ಮಾತು ನನ್ನ ಬಾಯಿಯಿಂದಲೇ ಬಂತು. ನಾನು ಬಿಳಿಯರ ಸಮುದಾಯಕ್ಕೆ ಸೇರಿಕೊಂಡು ಬಿಟ್ಟೆನೇನೋ ಎನ್ನುವ ಭಾವನೆ ಉಂಟಾಯಿತು. ಇಂಥ ಘಟನೆಗಳಿಗೆ ಮುಖಾಮುಖಿಯಾದಾಗ ಬರೆಯದೆ ಬೇರೆ ದಾರಿ ಇಲ್ಲ. ರೇಸಿಸ್ಟ್‌ನ ಅಂಡರ್ ಟೋನ್ ಈಗ ಹೆಚ್ಚಾಗುತ್ತಿದೆ. ಇಸ್ಲಾಂ ಫೋಬಿಯಾ ಸೆ. 11 ನಂತರ ಹೆಚ್ಚಾಗುತ್ತಿದೆ. ಸುಮ್ಮನೆ ಹೆದರಿಕೊಳ್ಳುವುದು ನಡೆಯುತ್ತಿದೆ. ಟ್ರಂಪ್ ಪೊಲಿಟಿಕಲ್ ಅಜೆಂಡಾದಲ್ಲಿ ಮುಸ್ಲಿಂ ನಿಷೇಧವೂ ಒಂದು. ಅವರು ಅಧ್ಯಕ್ಷರಾದ ಮೇಲೆ ಕೆಲವು ಸಂಗತಿಗಳನ್ನು ಸೂಚ್ಯವಾಗಿ ಹೇಳಬೇಕು ಎನ್ನುವ ಸೂಕ್ಷ್ಮವೂ ಉಳಿದಿಲ್ಲ. ವ್ಯಕ್ತಿ ಲಂಪಟ ಎನ್ನುವುದು ನಮಗೆ ಗೊತ್ತು. ಗಂಡಸರು ಇರುವುದೇ ಹಾಗೆ ಎಂದು ಹೆಂಗಸರೂ ಒಪ್ಪಿಕೊಂಡುಬಿಡುತ್ತಾರೆ. ವೈಯಕ್ತಿಕ ಚಾರಿತ್ರ್ಯ, ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಲು ಅಡ್ಡಿಯಲ್ಲ ಎನ್ನುತ್ತಾರೆ.

'ಹಿಜಾಬ್' ವಲಸೆಗಾರನ ದೃಷ್ಟಿಕೋನದಿಂದ ರೂಪುಗೊಂಡಿರುವ ಕಾದಂಬರಿ. ಒಂದು ದೇಶಕ್ಕೆ ಹೊಂದಿಕೊಳ್ಳುತ್ತಿರಲು ನಾವು ಪ್ರಯತ್ನ ಪಡುತ್ತಿರುವ ಸಂದರ್ಭದಲ್ಲಿ, ನಮಗಿಂತಲೂ ತಡವಾಗಿ ಬಂದವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಕಾದಂಬರಿಯಲ್ಲಿದೆ. ಹಾಗೆ ನೋಡಿದರೆ ಅಮೆರಿಕದಲ್ಲಿ ಇರುವ ಎಲ್ಲರೂ ವಲಸಿಗರೇ.

ಬೇರುಮಟ್ಟದಲ್ಲಿ ಜನ ಚೆನ್ನಾಗಿಯೇ ಇರುತ್ತಾರೆ. ಆದರೆ ಮೇಲಿನ ಪರಿಣಾಮಗಳು ತಳಮಟ್ಟಕ್ಕೂ ಮುಟ್ಟುತ್ತವೆ. ಇದು ದುರದೃಷ್ಟಕರ. ನಾವು ಅಲ್ಲಿಗೆ ಹೋಗುತ್ತಿದ್ದೇವೆ ಎನ್ನುವಷ್ಟೇ ಅಮೆರಿಕ ಕೂಡ ನಮ್ಮ ಬಳಿಗೆ ಬರುತ್ತಿದೆ ಎನ್ನುವುದು ನಿಜ. ಈ ಸಂಕ್ರಮಣ ಪರಿಸ್ಥಿತಿ ಸರಿಹೋಗಲು ಸ್ವಲ್ಪ ಸಮಯ ಬೇಕು. ನನಗೆ ಬೇಕಾಗಿರುವವರ ಬಳಿ ಮಾತ್ರ ಕೆಲಸ ಮಾಡಿಸುತ್ತೇನೆ ಎನ್ನುವುದು ಈಗ ಸಾಧ್ಯವೇ ಇಲ್ಲ.

● **ನಿಮ್ಮ ಅನುಭವದ ಪ್ರಕಾರ, ಅಮೆರಿಕದಲ್ಲಿನ ಕನ್ನಡಿಗರ ಮನಃಸ್ಥಿತಿ ಯಾವ ಬಗೆಯದು?**